ಹೀಗೆ ಹೇಳ್ತಿದಾನೆ ಅದೇನಿರಬಹುದೆಂಬ ಕುತೂಹಲ ಹೆಚ್ಚಾಗಿ ನಡಿಗೆ ಜೋರಾಗಿಸಿದ.

ನಟ ಕೆಳಗಿಳಿದು ಬಂದದ್ದೆ ತಡ. ಅಲ್ಲಿ ಗುಂಪುಗಟ್ಟಿ ಓದುತ್ತಿದ್ದ ಹುಡುಗರಲ್ಲೊಬ್ಬ ಪೇಪರಿನ ಮೊದಲ ಪುಟವನ್ನ ಎತ್ತಿ, 'ನೋಡೊ ನಟ ನೀನು' ಎಂದು ಕಣ್ಣಿಗೆ ಹಿಡಿದ. ನಟನಿಗೆ ಅದು ಜೂಮ್ ಹಾಕಿದಂತಾಗಿ ಸ್ಪಷ್ಟಗೊಳ್ಳದೆ ಅನತಿ ದೂರ ನಿಲ್ಲಿಸಿ ನೋಡಿದ. ಅದು ನಿನ್ನೆ ಫ್ರೀಡಂ ಪಾರ್ಕ್‌ನಲ್ಲಿ ನಡೆದ ಹೋರಾಟದ ದೃಶ್ಯವಿರುವ ಚಿತ್ರ. ಅದರ ಅಡಿಬರಹ ಹೀಗಿತ್ತು: 'ರಾಜಧಾನಿಯಲ್ಲಿ ರಿಮಾದಿ ಜನರ ಬೃಹತ್ ಶಕ್ತಿ ಪ್ರದರ್ಶನ. ಹರಿದು ಬಂದ ಎರಡು ಲಕ್ಷಕ್ಕೂ ಹೆಚ್ಚು ಜನಸಾಗರ.' ಇದನ್ನ ನೋಡಿದ ನಟ, ಇದರಲ್ಲಿ ನಾನೆಲ್ಲಿ ಕಾಣಲು ಸಾಧ್ಯ ಎಂದುಕೊಂಡನಾದರೂ ಯಾರೋ ಮತ್ತೂ ತೋರಿಸಿದಾಗ ಕಾಣಿಸಿತು. ಆ ಪತ್ರಿಕೆಯವರು ಬಳಸಿರುವ ಹೋರಾಟದ ದೊಡ್ಡ ಗಾತ್ರದ ಚಿತ್ರದಲ್ಲಿ ಬಸ್ ಮೇಲೆ ಅರೆಬೆತ್ತಲೆಯಾಗಿ ನಿಂತು ಅಂಗಿ ತಿರುಗಿಸುತ್ತಿರುವುದು ಇದೇ ನಟ. ಈತನ ಪಕ್ಕದಲ್ಲಿ ಇನ್ನೊಬ್ಬ ಇದ್ದನಾದರೂ ಅವನು ಕುಳ್ಳಕ್ಕಿದ್ದು ಇನ್ನೊಂದು ದಿಕ್ಕಿಗೆ ತಿರುಗಿದ್ದರಿಂದ ತಕ್ಷಣಕ್ಕೆ ಯಾರಿಗೂ ಗುರುತಾಗುತ್ತಿರಲಿಲ್ಲ. ತುಸು ಎತ್ತರಕ್ಕಿದ್ದ ನಟನನ್ನು ಬಲ್ಲವರು, ಇದು ನಮ್ಮ ನಟನೇ ಎನ್ನುವಷ್ಟು ಸ್ಪಷ್ಟವಾಗಬಹುದಾದ ಚಿತ್ರ ಪ್ರಕಟವಾಗಿತ್ತು. ಇದನ್ನ ನೋಡಿ ನಟನಿಗೆ ತಕ್ಷಣಕ್ಕೆ ಒಂಚೂರು ಖುಷಿಯಾಯಿತಾದರೂ... ಇನ್ನೊಂದಪ ದಿಗಿಲಿಕ್ಕಿಕೊಂಡಿತು.



ನಟರಾಜ ತುಮಕೂರಿನ ಆರ್ಟ್ಸ್ ಕಾಲೇಜಿನಲ್ಲಿ ಕಳೆದವರ್ಷವಷ್ಟೆ ಡಿಗ್ರಿ ಪೂರೈಸಿ ಎಂ.ಎ ಓದಲು ಬೆಂಗಳೂರಿನ ಜ್ಞಾನಭಾರತಿ ತಲುಪಿದ್ದ. ಜ್ಞಾನಭಾರತಿಗೂ ನಟನಿಗೂ ಹಳೆಯ ನಂಟು. ಪಿಯುಸಿ ಓದುವಾಗಲೇ ಒಮ್ಮೆ ರಜೆಯಲ್ಲಿ ಕೆಲಸ ಹುಡುಕಿಕೊಂಡು ಬೆಂಗಳೂರಿಗೆ ಬಂದಿದ್ದ ನಟ, ಅಲೆದಲೆದು ಸಾಕಾಗಿ ಸಂಶೋಧನೆ ಮಾಡುತ್ತಿದ್ದ ತನ್ನೂರಿನ ಹಿರಿಯನೊಬ್ಬನನ್ನು ಹುಡುಕಿ ಜ್ಞಾನಭಾರತಿ ತಲುಪಿದ್ದ. ಸ್ಟೋನ್ ಬಿಲ್ಡಿಂಗ್‌ನಲ್ಲಿ ಗಡದ್ದಾಗಿ ಚಪಾತಿ ಮೇಯ್ದುಕೊಂಡಿದ್ದ ಸಂಶೋಧನೆಯಾತ ತನ್ನೂರಿನಿಂದ ಬಂದವನೆಂಬ ಕಾಳಜಿಯಿಂದ ನಟನನ್ನು ನಾಕಾರುದಿನ ತನ್ನ ರೂಮಿನಲ್ಲೆ ಇರಿಸಿಕೊಂಡು ಚಪಾತಿ, ಕುಶ್ಕ ಸರಬರಾಜು ಮಾಡಿ ಚನ್ನಾಗಿ ಕಂಡು ಕಳುಹಿಸಿದ್ದ. ಅಲ್ಲಿನ ಸೋನಾಮಸೂರಿ ಅಕ್ಕಿ, ಚಪಾತಿ ಊಟಕ್ಕೆ ಮನಸೋತಿದ್ದ ನಟ, ತಾನು ಡಿಗ್ರಿ ಓದುವಾಗ ರಜೆ ಸಿಕ್ಕಾಗಲೆಲ್ಲ ಅಥವ ಯಾವುದಾದರೂ ಸ್ಟ್ರೈಕ್‌ಗಳು ಇದ್ದಾಗ ಕಡ್ಡಾಯವಾಗಿ ಟ್ರೈನ್ ಏರಿ ಬೆಂಗಳೂರು ತಲುಪುತ್ತಿದ್ದ. ಬಂದ ಕೆಲಸ ನೋಡಿಕೊಂಡು ರಾತ್ರಿ ತುಮಕೂರಿಗೆ ವಾಪಾಸ್ ಆಗದೆ, ಜ್ಞಾನಭಾರತಿ ತಲುಪಿಸುವ ಕೆಂಗೇರಿಯ ಬಸ್ ಅನ್ನು ಗೊರಗುಂಟೆ ಪಾಳ್ಯದಲ್ಲಿ ಹತ್ತುತ್ತಿದ್ದ.

ನಟ ಮೊದಲ ವರ್ಷದ ಡಿಗ್ರಿ ಓದುವಾಗ ಫೈನಲ್ ಇಯರ್‌ನಲ್ಲಿರುತ್ತಿದ್ದ ಸೀನಿಯರ್ ಸ್ಟುಡೆಂಟ್‌ಗಳು ಪದವಿ ಮುಗಿಸಿ ಕನ್ನಡದ್ದೊ, ಹಿಸ್ಟ್ರಿಯದ್ದೊ ಸ್ನಾತಕೋತ್ತರ ಪದವಿ ಪಡೆಯಲು ಜ್ಞಾನಭಾರತಿಯಲ್ಲಿರುತ್ತಿದ್ದರು. ಅವರ ರೂಮು ತಲುಪುತ್ತಿದ್ದ ನಟ ಒಂದೆರಡು ದಿನ ಅಲ್ಲೆ ತಂಗಿ, ಗೆಳೆಯರು ತಂದುಕೊಡುತ್ತಿದ್ದ ಚಪಾತಿ, ದೋಸೆ, ಕುಷ್ಕ ತಿಂದುಕೊಂಡಿರುತ್ತಿದ್ದ. ಕೆಲವೊಮ್ಮೆ ಡೈನಿಂಗ್ ಹಾಲ್‌ಗೂ ಪ್ರವೇಶ ಪಡೆದು ಸಾಕಷ್ಟು ಮೇಯುತ್ತಿದ್ದ. ಆಗೆಲ್ಲ ಅಲ್ಲಿನ ಗೋಡೆಯಲ್ಲಿ ಬರೆದಿದ್ದ 'ಬಲಿಕೊಡುವುದು ಕುರಿ ಕೋಳಿಗಳನ್ನೆ ಹೊರತು ಸಿಂಹವನ್ನಲ್ಲ, ಆದ್ದರಿಂದ ಓ ದಲಿತ ನೀನೆಂದೂ ಸಿಂಹವಾಗಿರು' ಎಂಬ ಸ್ಟೇಟ್‌ಮೆಂಟ್ ಓದಿಕೊಂಡು ಬಂದು, ತಾನಿರುವ ಡಿಗ್ರಿ ಹಾಸ್ಟೆಲ್‌ನಲ್ಲೂ ಅದನ್ನೆ ಬರೆಸಿದ್ದ.

ನಟ ಡಿಗ್ರಿ ಓದುವಾಗ ಕಾಲೇಜಿಗೆ ಹೋಗಿ ಸಮಾಜಶಾಸ್ತ್ರ ತಿಳಿದದ್ದಕ್ಕಿಂತ ಬೀದಿಯಲ್ಲಿದ್ದು ಸಮಾಜವನ್ನು ಗ್ರಹಿಸಿ, ಅದನ್ನು ಕಾರ್ಯಗತಗೊಳಿಸಲು ಆಗೊಮ್ಮೆ ಈಗೊಮ್ಮೆ ಕಾಲೇಜಿಗೆ ಹೋಗುತ್ತಿದ್ದ. ನಟ ಕಾಲೇಜಿಗೆ ಬಂದಿದ್ದಾನೆಂದರೆ ಯಾವುದೋ ಸ್ಟ್ರೈಕಿಗೆ ವಿದ್ಯಾರ್ಥಿಗಳನ್ನ